**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.</u>**

**<u>ಸಿ.ಸಿ.ನಂ.65/2021</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | ರವಿಕುಮಾರ ಗುಡಗೂರು | ಸಿಡಬ್ಲ್ಯೂ | 3 |
| ತಂದೆ ಹೆಸರು | ಚಂದ್ರಶೇಖರ | ಪಿಡಬ್ಲ್ಯೂ | 2 |
| ವಯಸ್ಸು | 46 ವರ್ಷ | | |
| ಉದ್ಯೋಗ | ಯಾವುದೇ ಕೆಲಸ ಇಲ್ಲ. | | |
| ವಾಸಸ್ಥಳ | ಇಜಾರಿಲಕಮಾಪುರ,ಹ ಾವೇರಿ | | |

<u>ದಿಃ **05.07.2025** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಮುಖ್ಯ ವಿಚಾರಣೆಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.</u>

**1).** ಒಂದು ವರ್ಷದ ಹಿಂದೆ ಘಟನಾ ಸ್ಥಳದ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ . ನಿ.ಪಿ-1 ಪಂಚನಾಮೆಗೆ ಸಹಿ ಮಾಡುವ ಮೊದಲು ಹಾವೇರಿಯ ಮಾಗಾವಿ ಪೆಟ್ರೋಲ್ ಪಂಪಗೆ ಪೆಟ್ರೋಲ್ ಹಾಕಿಸಲು ಹೋಗುವಾಗ ಮಹಿಳಾ ಪೊಲೀಸ ಠಾಣೆ ಎದುರಿಗೆ ಇರುವ ಕ್ಯಾಂಟಿನನಲ್ಲಿ ಚಹಾ ಕುಡಿಯುತ್ತಿದ್ದಾಗ ಪೊಲೀಸರು ನನ್ನನ್ನು ಕರೆಯಿಸಿ ನಿ.ಪಿ-1 ಪಂಚನಾಮೆಗೆ ನನ್ನ ಸಹಿ ಪಡೆದಿದ್ದಾರೆ. ಪೊಲೀಸರು ನಾನು ನಿ.ಪಿ-1 ಘಟನಾ ಸ್ಥಳಕ್ಕೆ ಪಂಚನಾಮೆ ಸಹಿ ಮಾಡುವಾಗ ಅದನ್ನು ಓದಿ ಹೇಳಿರುವದಿಲ್ಲ ಮತ್ತು ಪೊಲೀಸರು ನಿ.ಪಿ-1ರಲ್ಲಿ ಏನೆಲ್ಲ ಸಂಗತಿಗಳನ್ನ ಬರೆದಿರುತ್ತಾರೆ ಎಂದು ನನಗೆತಿಳಿಸಿರುವದಿಲ್ಲ. ಸಾಕ್ಷಿಯ ಸಹಿಯನ್ನು ನಿ.ಪಿ-1(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ನಿ.ಪಿ-2 ಪೋಟೋ ತೋರಿಸಲಾಗಿ ಸದರಿ ಪೋಟೋವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ.

<u>**(**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು**)**</u>

<u>ಪಾಟೀ ಸವಾಲುಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.</u>

**2)** ನನಗೆ ಮತ್ತು ಚಾ.ಸಾ-2 ತಾತೆಪ್ಪ ಇಬ್ಬರಿಗೂ ದಿನಾಂಕಃ 06.04.2021 ನೇ ಇಸ್ವಿಯಂದು ಸಾಯಂಕಾಲ 4-00 ರಿಂದ 5-00 ಘಂಟೆಗೆ ಪೊಲೀಸರು ನನ್ನನ್ನು ಮತ್ತು ಚಾ.ಸಾ-2 ತಾತೆಪ್ಪ ಇಬ್ಬರನ್ನೂ ಘಟನಾ ಸ್ಥಳಕ್ಕೆ ಕರೆಯಿಸಿ ಚಾ.ಸಾ-1 ಇವರು ತೋರಿಸಿದ ಘಟನಾ ಸ್ಥಳದ ಪ್ರಕಾರ ನಿ.ಪಿ-1 ಘಟನಾ ಸ್ಥಳದ ಪಂಚನಾಮೆ ಮಾಡಿದ್ದಾರೆ ಅಂದರೆ ಸರಿಯಲ್ಲ. ಅದೇ ಕಾಲಕ್ಕೆ ಘಟನಾ

ಸ್ಥಳದಲ್ಲಿ ನಿ.ಪಿ-2 ಪೋಟೋ ತೆಗೆದಿರುತ್ತಾರೆ ಅಂದರೆ ಸರಿಯಲ್ಲ. ಈ ಎಲ್ಲ ವಿಷಯ ಗೊತ್ತಿದ್ದರೂ, ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ.ಎನ್.ಜಿ.ಹೆಚ್ ವಕೀಲರಿಂದಃ ಆರೋಪಿ ಪರವಾಗಿ ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.